14 ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

**ಸಿಸಿ ನಂ. 62273/2023** **DW**-2

| | |
|---|---|
| ಹೆಸರು | ಪಂಚಾಕ್ಷರಿ |
| ತಂದೆಯ ಹೆಸರು | Kotrabasappa Badami |
| ವಯಸ್ಸು | 49 |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ರಾಣೆಬೆನ್ನೂರು |

ದಿನಾಂಕಃ**08.04.2025** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ.ಯು.ಟಿ.ಬಿ., ವಕೀಲರಿಂದ:-**

**1.** ಕಳೆದ 8-10 ವರ್ಷಗಳಿಂದ ನನಗೆ ಆರೋಪಿಯ ಪರಿಚಯ ಇರುತ್ತದೆ. ಆತ ಅಗರಬತ್ತಿ ಮತ್ತು ಕರ್ಪೂರ ವ್ಯಾಪಾರ ಮಾಡುತ್ತಾನೆ. 2022-23 ರಲ್ಲಿ ದೂರುದಾರರು ಆರೋಪಿಗೆ ಪೂರೈಕೆ ಮಾಡಿದ ಕರ್ಪೂರದ ಪೌಡರ್ ಕಳಪೆ ಮಟ್ಟದ್ದಾಗಿತ್ತು. ಅದನ್ನು ನಾನು ನೋಡಿದ್ದೆ. ಆ ಕಳಪೆ ಮಟ್ಟದ ಪೌಡರನ್ನು ಬಳಸಿ ತಯಾರಿಸಿದ ಕರ್ಪೂರದ ಗುಳಿಗೆ ಕಪ್ಪು ಬಣ್ಣಕ್ಕೆ ತಿರುಗಿತ್ತು. ಅದನ್ನು ಆರೋಪಿಯು ಮಾರುಕಟ್ಟೆಗೆ ಮಾರಾಟ ಮಾಡಿದ್ದು, ಅದು ಮಾರಾಟ ಆಗದೇ ವಾಪಾಸಾಗಿತ್ತು. ಈ ವಿಷಯವನ್ನು ಆರೋಪಿಯು ನನಗೆ ತಿಳಿಸಿದ್ದಾನೆ. ವಾಪಾಸಾದ ಮಾಲಿನ ಫೋಟೋ ತೆಗೆದು ದೂರುದಾರರಿಗೆ ಕಳುಹಿಸಿಕೊಡು ಎಂದು ನಾನು ಆರೋಪಿಗೆ ಸಲಹೆ ನೀಡಿದ್ದೇನೆ. ಅದರ ಪ್ರಕಾರ ಆರೋಪಿಯು ದೂರುದಾರರಿಗೆ ಮಾಲಿನ ಫೋಟೋ ಕಳುಹಿಸಿದ್ದಾರೆ. ಆದರೆ, ದೂರುದಾರರು ಹಳೆಯ ಮಾಲನ್ನು ವಾಪಾಸ್ಸು ಪಡೆದುಕೊಂಡು ಹೊಸ ಮಾಲನ್ನು ಆರೋಪಿಗೆ ಕೊಡಲಿಲ್ಲ.

**2.** ದೂರುದಾರರ ಪರವಾಗಿ ಹರಿಕುಮಾರ್ ರವರು ಆರೋಪಿಯ ಸಂಸ್ಥೆಗೆ ಬಂದಿದ್ದರು. ಅವರಿಗೆ ನಾನು ಮೇಲಿನ ವಿಷಯವನ್ನು ತಿಳಿಸಿದ್ದೇನೆ. ಹಳೆಯ ಮಾಲನ್ನು ವಾಪಾಸ್ಸು ಪಡೆದುಕೊಂಡು ಹೊಸ ಮಾಲನ್ನು ಕೊಡುತ್ತೇವೆಂದು ಅವರು ಹೇಳಿದ್ದು, ಹೊಸ ಮಾಲನ್ನು

This is a True Copy of the Court Records Online. Authenticated @ districts.ecourtsindia.com/cnr/KABC0C0355092023/truecopy/order-6.pdf

ಕೊಡಲಿಲ್ಲ.  ಮುಂದೆ ಏನಾಯಿತು ಎಂದು ನನಗೆ ಗೊತ್ತಾಗಲಿಲ್ಲ. ದೂರುದಾರರು ತನ್ನ ವಿರುದ್ಧ ಚೆಕ್ ಅಮಾನ್ಯದ ಪ್ರಕರಣವನ್ನು ದಾಖಲಿಸಿದ್ದಾರೆಂದು ಆರೋಪಿಯು ನನಗೆ ನಂತರದಲ್ಲಿ ಹೇಳಿದ್ದಾರೆ. ಆರೋಪಿಯ ಮನೆಯಲ್ಲಿದ್ದ ಚೆಕ್ಕನ್ನು ಹರೀಶ್‌ಕುಮಾರ್ ರವರು ತೆಗದುಕೊಂಡು ಹೋಗಿದ್ದಾರೆಂದು ಆರೋಪಿಯು ನನಗೆ ಹೇಳಿದ್ದಾರೆ. ಕಳಪೆ ಮಟ್ಟದ ಮಾಲನ್ನು ವಾಪಾಸ್ಸು ಪಡೆದುಕೊಂಡು ಹೋಗದೆ, ಚೆಕ್ ಅಮಾನ್ಯದ ಪ್ರಕರಣವನ್ನು ಹಾಕಿದ್ದಾರೆಂದು ಆರೋಪಿಯು ನನಗೆ ಹೇಳಿದ್ದಾರೆ.

(ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ**

**14 ನೇ ಅ.ಮು.ನ್ಯಾ.ದಂ,**
**ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC0C0355092023/truecopy/order-6.pdf